ಕೊಡುವಾಗ ಅಂಥ ಮಹನೀಯರಿಗೆ ಕೂಡ ನ್ಯಾಯದೊರಕುವಂತೆ ಗುರುತಿಸುವ ಕಾರ್ಯವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕುಂಬ್ಳೆ ಸುಂದರರಾವ್:- ಮಾನ್ಯ ಅಧ್ಯಕ್ಷರೇ, ಒಂದು ಸಣ್ಣ ವಾಕ್ಯವನ್ನು ಹೇಳುತ್ತೇನೆ. ಕಳೆದ ಸಲ ಯಕ್ಷಗಾನ ಅಕಾಡಮಿಗೆ ಜನರನ್ನು ಆಯ್ಕೆ ಮಾಡುವುದಕ್ಕಾಗಿ ಕೆಲವು ಹೆಸರುಗಳನ್ನು ಕೊಟ್ಟಿದ್ದೆ. ದುರ್ದೈವ ಏನಾಯಿತೆಂದರೆ ನಾನು ಕೊಟ್ಟ ಅಷ್ಟೂ ಹೆಸರುಗಳನ್ನು ಕೈಬಿಟ್ಟು ನನ್ನನ್ನು ಅಕಾಡಮಿಯ ಸದಸ್ಯರನ್ನಾಗಿ ಮಾಡಿದರು. ನಾನು ಇಲ್ಲಿ ಭಾಗವಹಿಸುವುದೋ? ಅಲ್ಲಿ ಭಾಗವಹಿಸುವುದೋ? ಇದು ಸರಿಯಾಗಿಲ್ಲ. ಸರಿಯಾದ ಅರ್ಹ ವ್ಯಕ್ತಿಗಳಿದ್ದಾರೆ. ನಿಮ್ಮ ಆಯ್ಕೆ ಮಾಡುವಂಥ ಸಮಿತಿಯಲ್ಲಿ ಒಬ್ಬಿಬ್ಬರು ಕಲಾವಿದರುಗಳನ್ನು, ಅನುಭವಿಗಳನ್ನು ಸೇರಿಸಿಕೊಳ್ಳುವ ಕೆಲಸ ಮಾಡಿ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್:- ಮಾನ್ಯ ಸದಸ್ಯರುಗಳ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ವಿಷಯ:- ಹುಣಸೂರು ಮತ್ತು ವಿರಾಜಪೇಟೆ ಮಧ್ಯೆ ಇರುವ ರಸ್ತೆಯ ದುರಸ್ತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 170 (1132)

ಶ್ರೀ ಸಿ.ಹೆಚ್.ವಿಜಯಶಂಕರ್ (ಹುಣಸೂರು):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ಮತ್ತು ವಿರಾಜಪೇಟೆ ಮಧ್ಯೆ ಇರುವ ರಸ್ತೆ ತುಂಬ ಹದಗೆಟ್ಟಿರುವುದು ಮತ್ತು ವಾಹನ ಸಂಚಾರಕ್ಕೆ ತೀವ್ರ ಅನಾನುಕೂಲವಾಗಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಸದರಿ ರಸ್ತೆಯನ್ನು ಎಷ್ಟು ದಿನಗಳಲ್ಲಿ ದುರಸ್ತಿ ಮಾಡಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):-

ಅ) ಹುಣಸೂರು ಮತ್ತು ವಿರಾಜಪೇಟೆ ಮಧ್ಯೆ ಇರುವ ರಸ್ತೆಯ ಕೆಲವು ಭಾಗಗಳು ಕೆಟ್ಟಿದ್ದು, ವಾಹನ ಸಂಚಾರಕ್ಕೆ ಕೆಲವು ಕಡೆ ಅನಾನುಕೂಲವಾಗಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಸದರಿ ರಸ್ತೆಯು ಒಟ್ಟು 55.64 ಕಿಮೀ. ಉದ್ದವಿದ್ದು, ಈ ರಸ್ತೆಯಲ್ಲಿ ಉಂಟಾಗಿರುವ ಗುಂಡಿಗಳನ್ನು ಮುಚ್ಚಿ, ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳಲಾಗಿದೆ. 1996-97ನೇ ಸಾಲಿನಲ್ಲಿ ಈ ರಸ್ತೆಯ 8.0ನೇ ಕಿ.ಮೀ.ನಲ್ಲಿ ಒಂದು ಸೇತುವೆಯ ನಿರ್ಮಾಣವನ್ನು ಸೇರಿಸಿ, ಆಯ್ದ ಭಾಗಗಳ ದುರಸ್ತಿ ಹಾಗೂ ಮರು ಡಾಂಬರೀಕರಣ ಕಾಮಗಾರಿಗಳನ್ನು ಒಟ್ಟು 32.00 ಲಕ್ಷ ರೂ.ಗಳ ಅಂದಾಜಿನಲ್ಲಿ ಕೈಗೊಳ್ಳಲಾಗಿದೆ. ಇದರಲ್ಲಿ, ಒಟ್ಟು 6 ಕಾಮಗಾರಿಗಳು ಸೇರಿದ್ದು, 2 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. 2 ಕಾಮಗಾರಿಗಳಿಗೆ ಗುತ್ತಿಗೆದಾರರನ್ನು ನಿಗಧಿಪಡಿಸಿದ್ದು,

ಶೀಘ್ರದಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು. 2 ಕಾಮಗಾರಿಗಳಿಗೆ ಮಂಜೂರಾತಿ ನೀಡಿದ್ದು, ಶೀಘ್ರದಲ್ಲಿ ಗುತ್ತಿಗೆದಾರರನ್ನು ನಿಗಧಿಪಡಿಸಿ, ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಈ ಸಾಲಿನ ಒಳಗಾಗಿ ಈ ರಸ್ತೆಯನ್ನು ಸಂಪೂರ್ಣ ದುರಸ್ತಿಪಡಿಸಲಾಗುವುದು.

+ಶ್ರೀ ಸಿ.ಹೆಚ್.ವಿಜಯಶಂಕರ್:- ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆಯು ಏತಕ್ಕೆ ಹೀಗಾಯಿತು ಎಂಬುದು ನನಗೆ ಅಥವಾಗುತ್ತಿಲ್ಲ. ಒಂದು ರೀತಿಯಲ್ಲಿ ಗರಬಡಿದಂಥ ವಾತಾವರಣ. ಇದು ಯಾವುದೇ ಕಾರಣಕ್ಕೂ ಕೂಡ ಸಲ್ಲದು. ನಾನು ಶಾಸಕನಾಗಿ ಕಳೆದ ಒಂದೂವರೆ ವರ್ಷದಿಂದ ಇಲಾಖಾ ವೈಖರಿಯನ್ನು ಪರೀಕ್ಷೆ ಮಾಡುತ್ತಾ ಇದ್ದೇನೆ. ಇಲಾಖಾ ಅಧಿಕಾರಿಗಳು ತಮಗೆ ಉತ್ತರವನ್ನು ಒದಗಿಸಿದ್ದಾರೆಂದು ನಾನು ಭಾವಿಸುತ್ತೇನೆ. ಇಲ್ಲಿ ಒದಗಿಸಿದಂಥ ಉತ್ತರವು ನೂರಕ್ಕೆ ನೂರು ಭಾಗದಷ್ಟು ಸುಳ್ಳು ಎಂದು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಬಿದ್ದಂಥ ಗುಂಡಿಗಳನ್ನು ಮುಚ್ಚಲಾಗಿದೆ, ಅದಕ್ಕೆ ಬೇಕಾದಂಥ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ, ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ ಎಂಬ ಮಾಹಿತಿಗಳನ್ನು ಕೊಟ್ಟಿದ್ದಾರೆ. ಹೀಗೆ ಪೂರ್ಣ ಪ್ರಮಾಣದ ಸುಳ್ಳು ಮಾಹಿತಿಯನ್ನು ಒದಗಿಸಿಕೊಟ್ಟಿದ್ದಾರೆ. ಎರಡನೆಯದಾಗಿ ಹುಣಸೂರು-ವಿರಾಜಪೇಟೆ ರಸ್ತೆಯ ಗುಂಡಿಗಳನ್ನು ಬಿಟ್ಟು ಪಕ್ಕದಲ್ಲಿ ಹೋಗೋಣ ಅಂದರೆ ರಸ್ತೆಯಿಂದ ಒಂದು - ಎರಡು ಅಡಿಗಳಷ್ಟು ಇಳಿಯಬೇಕು. ಎದುರುಗಡೆಯಲ್ಲಿ ಏನಾದರೂ ಒಂದು ವಾಹನ ಬರುತ್ತಿದೆ ಎಂದರೆ ಆ ವಾಹನ ಪಾಸ್ ಆಗುವವರೆಗೂ ಇನ್ನೊಂದು ವಾಹನ ಅಲ್ಲಿ ನಿಲ್ಲಬೇಕಾಗುತ್ತದೆ. ಅಷ್ಟು ಕಳಪೆ ಮಟ್ಟದ ಅವ್ಯವಸ್ಥೆಯನ್ನು ಹೊಂದಿದಂಥ ಒಂದು ರಾಜ್ಯದ ಹೆದ್ದಾರಿಯನ್ನು ಬೇರೆ ಎಲ್ಲೂ ನಾವು ಕಾಣುವುದಕ್ಕೆ ಸಾಧ್ಯವಿಲ್ಲ. ರಸ್ತೆಗಳಲ್ಲಿನ ಗುಂಡಿ-ಹಳ್ಳಗಳು ಸಾಮಾನ್ಯವಾದಂಥ ವಿಚಾರ. ರಸ್ತೆಗಳು ಹದಗೆಟ್ಟಿರುವ ಜೊತೆಗೆ ರಸ್ತೆಯ ಪಕ್ಕದ ವ್ಯವಸ್ಥೆಯು ಕೂಡ ಸರಿಯಿಲ್ಲದಿರುವುದರಿಂದ ನೀವು ಇದನ್ನು ತಾವು ಸ್ವತಃ ಪರಿಶೀಲನೆ ಮಾಡಬೇಕು. ಜೊತೆಗೆ ಇದಕ್ಕೆ ಸಂಬಂಧಪಟ್ಟ ಹಾಗೆ ತತ್‌ಕ್ಷಣ ಕ್ರಮವನ್ನು ಜರುಗಿಸಬೇಕು. ಇಲ್ಲವಾದರೆ ಇದು ಸರಕಾರಕ್ಕೆ ಗೌರವ ತರುವ ವಿಚಾರವಾಗಲಾರದು. 1995-96ರ ಸಾಲಿಗೆ ಸಂಬಂಧಪಟ್ಟ ಹಾಗೆ ನನ್ನ ಕ್ಷೇತ್ರವ್ಯಾಪ್ತಿಯ ಕೆಲಸಕಾರ್ಯಗಳು ಇದುವರೆಗೂ ಪ್ರಾರಂಭವಾಗಿಲ್ಲ. ಈ ರೀತಿಯ ವ್ಯವಸ್ಥೆಯು ಗೌರವ ತರುವಂಥಾದ್ದು ಅಲ್ಲ. ಎರಡನೇದಾಗಿ ಇಲಾಖೆಯ ಕೆಲಸ ಏನೆಂದರೆ ಕೇವಲ ಟಾರನ್ನು ಬಳಿಯುವುದು. ಎಷ್ಟು ಹದಗೆಟ್ಟು ಹೋದ ವ್ಯವಸ್ಥೆ ಇಲ್ಲಿದೆ ಅಂದರೆ ಟಾರ್ ಬಳಿದು ಹೋದರೆ ರಸ್ತೆ ದುರಸ್ತಿಯಾಯಿತು ಎಂಬ ಭಾವನೆ ಇಟ್ಟುಕೊಳ್ಳಬಾರದು. ಬಹಳ ಪ್ರಾಮಾಣಿಕರಾದ ತಾವುಗಳು ಈ ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೀರಿ. ಹದಗೆಟ್ಟು ಹೋಗಿರುವ ಈ ವ್ಯವಸ್ಥೆಗೆ ಹೆಚ್ಚಿನ ವಿಶೇಷ ಗಮನವನ್ನು ಕೊಟ್ಟು ಇಲಾಖೆಗೆ ಒಂದು ಹೊಸ ಶಕ್ತಿಯನ್ನು ತುಂಬಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ.ಉದಾಸಿ:- ಮಾನ್ಯ ಸಭಾಧ್ಯಕ್ಷರೇ, ಹುಣಸೂರು-ವಿರಾಜಪೇಟೆ ರಸ್ತೆಯು ಕೆಟ್ಟಿದ್ದರ ಬಗ್ಗೆ ಅವರು ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ದುರಸ್ತಿ ಕಾರ್ಯಕ್ರಮವನ್ನು ಕೈಗೊಳ್ಳುವುದರ ಸಲುವಾಗಿ 32 ಲಕ್ಷ ರೂ.ಗಳ ಅಂದಾಜು ವೆಚ್ಚದ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ರಸ್ತೆ ಅಗಲ ಮಾಡುವುದು, ಟಾರ್ ಹಾಕುವುದು ಮುಂತಾದವುಗಳ ಜೊತೆಗೆ ರಸ್ತೆಯ ಗುಂಡಿಗಳನ್ನು ಮುಚ್ಚುವ ಕೆಲಸವನ್ನು ಮಾಡಲೇಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಾನು ಸ್ವತಃ ಪರಿಶೀಲನೆ ಮಾಡಬೇಕೆಂದು ಕೇಳಿಕೊಂಡಿದ್ದಾರೆ. ನಾನು ಸ್ವತಃ ಒಮ್ಮೆ ಭೇಟಿ ನೀಡಿ ಈ ಕೆಲಸವನ್ನು ಯಾವರೀತಿಯಾಗಿ ಮಾಡಿ ಸುವ್ಯವಸ್ಥೆಗೊಳಿಸಬೇಕೆಂಬ ಬಗ್ಗೆ ಕ್ರಮ ಜರುಗಿಸುತ್ತೇನೆ.

ಶ್ರೀ ಹೆಚ್.ಎನ್.ನಂಜೇಗೌಡ:- ಮಾನ್ಯ ಅಧ್ಯಕ್ಷರೇ, ಈ ರಸ್ತೆಯಲ್ಲಿ ಮಾನ್ಯ ನಾಣಯ್ಯನವರು, ನಾನು ಹಾಗೂ ಇಲ್ಲಿರುವ ಬಹಳ ಜನ ಸದಸ್ಯರು ಎಲ್ಲರೂ ಹೋಗಿದ್ದೇವೆ.

ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಸದಸ್ಯರು ಹೇಳಿದ ಪರಿಸ್ಥಿತಿಯು ಸರಿಯಾಗಿಯೇ ಇದೆ.

ಅಧ್ಯಕ್ಷರು:- ಮಾನ್ಯ ಸದಸ್ಯರುಗಳು ಹೇಳುವ ವಿಚಾರ ಸರಿಯಾಗಿದೆ ಎಂದು ತಿಳಿದು ಬಂತು. ನಿಮ್ಮ ಆಫೀಸರ್ಸ್ ನಿಮಗೆ ಆ ತರಹ ಇನ್‌ಫರ್ಮೇಶನ್ ಕೊಟ್ಟಾಗ ಪ್ರಶ್ನೋತ್ತರ ಮುಗಿದ ಕೂಡಲೇ ಅಂಥ ಸಂಬಂಧ ಪಟ್ಟ ಅಧಿಕಾರಿಗಳನ್ನು ಕರೆಯಿಸಿರಿ. ಏಕೆ ಆ ತರಹದ ಇನ್‌ಫರ್ಮೇಶನ್ ಕೊಟ್ಟರು ಎಂದು ಕೇಳಬೇಕು. ನಾನು ಈ ಅಧ್ಯಕ್ಷ ಸ್ಥಾನದಿಂದ ನೀವು ಏನು ಮಾಡಬೇಕೆಂದು ಹೇಳುವುದಿಲ್ಲ. ನೀವು ಏನು ಮಾಡಬಹುದು ಎಂದು ನನಗೊಂದು ನಿರೀಕ್ಷೆ ಇದೆ. ದಯಮಾಡಿ ನಮ್ಮನ್ನು ಮಿಸ್‌ಲೀಡ್ ಮಾಡಬೇಡಿ. They cannot mislead the House by giving incorrect information. ಒಬ್ಬ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದಾಗ ಎಲ್ಲಾ ಸರಿಯಾಗಿದೆ ಎಂದು ಹೇಳಿದರೆ ಎಷ್ಟು ಬೇಜವಾಬ್ದಾರಿ ಅಧಿಕಾರಿಗಳಲ್ಲಿದೆ ಎಂಬುದು ಗೊತ್ತಾಗುತ್ತದೆ.

ಶ್ರೀ ಹೆಚ್.ಎನ್.ನಂಜೇಗೌಡ:- ಮಾನ್ಯ ಸದಸ್ಯರು ಹೇಳಿದ್ದಷ್ಟೇ ಅಲ್ಲ, ಅಲ್ಲಿ ಇನ್ನೊಂದು ಏನಾಗಿದೆ ಅಂದರೆ ಬಹುಶಃ ರೋಡ್‌ನ ಅಗಲ ಈ ಅಸ್ಫಾಲ್ಟ್ ಮಾಡಿರುವುದು 14 ರಿಂದ 15 ಅಡಿಗಳವರೆಗೆ ಇರಬಹುದು. ಅದಾದ ಮೇಲೆ ಸೈಡ್‌ನಲ್ಲಿ ಅರ್ಧ ಅಡಿ. ಹೀಗಾಗಿ ಕಾರಿನ ಯು-ಕ್ಲಾಂಪ್ಸ್ ಎಲ್ಲವೂ ಹೊರಟು ಹೋಗುತ್ತದೆ. ರೋಡನ್ನು ಮಾಡಿದರಷ್ಟೇ ಸಾಲದು. ಅದು ಚೆನ್ನಾಗಿ ಬಾಳಿಕೆ ಬರಬೇಕಾದರೆ ರೋಡ್‌ಸೈಡನ್ನೂ ಕೂಡ ಸ್ವಲ್ಪ ಜಲ್ಲಿ ಹಾಕಿ ಅಗಲ ಮಾಡಿಕೊಂಡು ಸ್ಲೋಪ್‌ಕೊಟ್ಟುಕೊಂಡು ಮಾಡಬೇಕಾಗುತ್ತದೆ. ಇದು ಆ ಎಸ್ಟಿಮೇಟ್‌ನಲ್ಲಿ ಸೇರಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಸಿ.ಎಂ.ಉದಾಸಿ:- ವಿವರವಾದ ವರದಿಯನ್ನು ತರಿಸಿಕೊಂಡು ಏನು ಮಾಡಲಿಕ್ಕೆ

ಸಾಧ್ಯವೋ ಅದನ್ನು ಮಾಡುತ್ತೇನೆ.

ಅಧ್ಯಕ್ಷರು:- ಮುಂದಿನ ಪ್ರಶ್ನೆ ಶ್ರೀ ವಿಶ್ವೇಶ್ವರ ಹೆಗಡೆಯವರದನ್ನು ತಡೆಹಿಡಿಯುತ್ತೇನೆ. ಮುಂದಿನ ವಾರ ಅವರಿದ್ದಾಗ ತೆಗೆದುಕೊಳ್ಳೋಣ.

ವಿಷಯ:- ಚಿಕ್ಕಮಗಳೂರಿನ ಪ್ರವಾಸೋದ್ಯಮ ಕೇಂದ್ರಗಳ ಅಭಿವೃದ್ಧಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 172 (1063)

ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು):- ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಪ್ರವಾಸೋದ್ಯಮ ಕೇಂದ್ರಗಳಿವೆ?

ಆ) ಈ ಪ್ರವಾಸೋದ್ಯಮ ಕೇಂದ್ರಗಳ ಅಭಿವೃದ್ಧಿಗಾಗಿ ಸರ್ಕಾರದವರು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು? ಯಾವ ಯಾವ ಪ್ರವಾಸೋದ್ಯಮ ಕೇಂದ್ರಗಳ ಅಭಿವೃದ್ಧಿಯನ್ನು ಮಾಡಲಾಗಿದೆ?

ಇ) 1994-95 ಹಾಗೂ 1995-96ನೇ ಸಾಲಿನಲ್ಲಿ ಪ್ರವಾಸೋದ್ಯಮ ಕೇಂದ್ರಗಳ ಅಭಿವೃದ್ಧಿಗಾಗಿ ಖರ್ಚಾಗಿರುವಂತಹ ಹಣವೆಷ್ಟು (ವಿವರ ನೀಡುವುದು).

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):-

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ 17 ಪ್ರವಾಸೋದ್ಯಮ ಕೇಂದ್ರಗಳಿವೆ.

ಆ) ಈ ಪ್ರವಾಸೋದ್ಯಮ ಕೇಂದ್ರಗಳ ಅಭಿವೃದ್ಧಿಗಾಗಿ ಪ್ರವಾಸೋದ್ಯಮ ನೀತಿ ಜಾರಿಗೆ ತರಲಾಗಿದೆ. ಈ ನೀತಿಯಂತೆ ಈ ಸ್ಥಳಗಳಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ನಿರ್ಮಿಸಲು ಮುಂದೆ ಬರುವ ಖಾಸಗಿ ಉದ್ಯಮಿಗಳಿಗೆ ಸಬ್ಸಿಡಿ, ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡುವ ಮೂಲಕ ಪ್ರೋತ್ಸಾಹಿಸಲಾಗುವುದು ಅಲ್ಲದೆ, ಇಲಾಖೆಯು ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ಕೆಳಕಂಡ ಯೋಜನೆಗಳನ್ನು ಕೈಗೊಂಡಿರುತ್ತದೆ.

1. ಕೇಂದ್ರ ಧನ ಸಹಾಯದಿಂದ ರೂ. 42.29 ಲಕ್ಷ ವೆಚ್ಚದಲ್ಲಿ ಚಿಕ್ಕಮಗಳೂರು ಬಳಿ ಹೆದ್ದಾರಿ ಸೌಲಭ್ಯ ನಿರ್ಮಿಸಲಾಗಿದೆ. ಇದನ್ನು ನಿರ್ವಹಣೆಗಾಗಿ ತಾಜ್ ಕರ್ನಾಟಕ ಹೋಟೆಲ್ಸ್ ಮತ್ತು ರಿಸಾರ್ಟ್ಸ್ ಸಂಸ್ಥೆಗೆ ವಹಿಸಿಕೊಡಲಾಗಿದೆ.

2. ಚಿಕ್ಕಮಗಳೂರಿನಲ್ಲಿ ತಾಜ್ ಕರ್ನಾಟಕ ಹೋಟೆಲ್ಸ್ ಮತ್ತು ರಿಸಾರ್ಟ್ಸ್ ನಿಯಮಿತದವರು ರಸ್ತೆ ಬದಿ ರೆಸಾರ್ಟ್ಸ್ ಅಭಿವೃದ್ಧಿಗೊಳಿಸುತ್ತಿದ್ದು, ಅದರ ಬಗ್ಗೆ ಟೆಂಡರ್‌ಗಳನ್ನು ಕರೆದು ಸದರಿ ಟೆಂಡರ್‌ಗಳನ್ನು ಈ ದಿವಸ ತೆರೆಯಲಾಯಿತು. ಈ